# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 210 |
| 2. ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ |
| 3. ಉತ್ತರಿಸುವ ದಿನಾಂಕ | : | 06/12/2023 |
| 4. ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ ಬಳ್ಳಾರಿ ನಗರದಲ್ಲಿ ನೂತನವಾಗಿ ನಿರ್ಮಿಸಲಾದ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹವನ್ನು ಯಾವ ವರ್ಷ ಉದ್ಘಾಟನೆ ಮಾಡಲಾಯಿತು. ಇದಕ್ಕೆ ಖರ್ಚಾದ ಒಟ್ಟು ಮೊತ್ತ ಎಷ್ಟು; ಯಾವ ಗುತ್ತಿಗೆದಾರರು ಕಟ್ಟಡದ ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ; (ಗುತ್ತಿಗೆದಾರರ ಹೆಸರಿನೊಂದಿಗೆ ವಿವರ ನೀಡುವುದು) | ಬಳ್ಳಾರಿ ನಗರದಲ್ಲಿ ನೂತನವಾಗಿ ನಿರ್ಮಿಸಲಾದ ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹವನ್ನು ದಿನಾಂಕ:04.08.2022 ರಂದು ಉದ್ಘಾಟನೆ ಮಾಡಲಾಯಿತು. ಇದಕ್ಕೆ ಖರ್ಚಾದ ಒಟ್ಟು ಮೊತ್ತ ರೂ. 666.93 ಲಕ್ಷಗಳು.<br><br>ಸದರಿ ಕಟ್ಟಡದ ಕಾಮಗಾರಿಯನ್ನು ಮೇ.ಶ್ರೀನಿವಾಸ ಕನ್ಸಟ್ರಕ್ಷನ್ಸ್, (ಇಂಡಿಯಾ ಪ್ರೈವೇಟ್ ಲಿ.,) 1ನೇ ದರ್ಜೆ ಗುತ್ತಿಗೆದಾರರು ನಿರ್ಮಿಸಿರುತ್ತಾರೆ. |
| ಆ) | ಈ ಕಟ್ಟಡದಲ್ಲಿನ ಪೀಠೋಪಕರಣಗಳಿಗೆ ಮಾಡಲಾದ ಖರ್ಚು ಎಷ್ಟು ಯಾವ ಯಾವ ಸಾಮಗ್ರಿಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಖರೀದಿ ಮಾಡಲಾಗಿದೆ; ಯಾವ ಗುಣ ಮಟ್ಟದ ಸಾಮಗ್ರಿಗಳನ್ನು ಖರೀದಿಸಲಾಗಿದೆ; ಇದಕ್ಕೆ ವ್ಯಯಿಸಲಾದ ಹಣ ಎಷ್ಟು; (ಟೆಂಡರ್ ನೀಡಲಾದ ಕಂಪನಿಯ ಪೂರ್ಣ ವಿವರ ನೀಡುವುದು) | ಈ ಕಟ್ಟಡದಲ್ಲಿನ ಪೀಠೋಪಕರಣಗಳಿಗೆ ಕಟ್ಟಡ ನಿರ್ಮಾಣದ ಕಾಮಗಾರಿ ಅಂದಾಜು ಪಟ್ಟಿಯಲ್ಲಿ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಪೀಠೋಪಕರಣಗಳಿಗಾಗಿ ಲೆಕ್ಕಶೀರ್ಷಿಕೆ 2059 (ಯೋಜನೇತರ) ಅಡಿಯಲ್ಲಿ ಪ್ರತ್ಯೇಕವಾಗಿ ರೂ.53.56 ಲಕ್ಷಗಳ ಅನುದಾನವನ್ನು ಒದಗಿಸಿ ನಿರ್ವಹಿಸಲಾಗಿರುತ್ತದೆ.<br><br>ಸದರಿ ಕಾಮಗಾರಿಯನ್ನು ಶ್ರೀ ಎಂ. ಶಿವಪ್ಪ ಮೂಲಿಮನಿ, ತಳಕಲ್ ತಾಲ್ಲೂಕು ಯಲಬುರ್ಗ ಜಿಲ್ಲೆ ಇವರಿಗೆ ವಹಿಸಲಾಗಿರುತ್ತದೆ. ಅನುಮೋದಿತ ಗುತ್ತಿಗೆ ಮೊತ್ತ ರೂ.62,87,036.00 ಇದ್ದು, 2019-20ನೇ ಸಾಲಿನ ದರಗಳಿಗೆ ಹೋಲಿಸಿದಾಗ 4.80% ಹೆಚ್ಚಳ ಇರುತ್ತದೆ. |
| ಇ) | ಲೋಕೋಪಯೋಗಿ ಅತಿಥಿ ಗೃಹದ ನೂತನ ಕಟ್ಟಡವನ್ನು ಮೂರನೇ ವ್ಯಕ್ತಿಯಿಂದ ಗುಣಮಟ್ಟದ ಪರೀಕ್ಷೆಯನ್ನು ಮಾಡಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ಸಂಸ್ಥೆಯಿಂದ ಮಾಡಲಾಗಿದೆ; (ವಿವರ ನೀಡುವುದು) | ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳ ಗುಣಭರವಸೆ ಬಗ್ಗೆ 3rd Party Inspection ಗೆ ಒಳಪಡಿಸುವುದಿಲ್ಲ. ಇಲಾಖೆಯ ಗುಣಭರವಸೆ ವಲಯದ ವತಿಯಿಂದ ಗುಣಮಟ್ಟದ ಪರೀಕ್ಷೆಯನ್ನು ಕಾಲಕಾಲಕ್ಕೆ Quality assurance plan ಪ್ರಕಾರ ಮಾಡಿಸಲಾಗಿರುತ್ತದೆ. |
| ಈ) | ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದ ಕಾಮಗಾರಿಯ ಗುಣಮಟ್ಟ ಕಳಪೆ ಕಾಮಗಾರಿಯಿಂದ ಕೂಡಿದ್ದು, ಕೊಠಡಿಗಳಲ್ಲಿ ಕಟ್ಟಡದಲ್ಲಿ ಬಿರುಕುಗಳು ಮೂಡಿದ್ದು, ಮಂಚಗಳು, ಕುರ್ಚಿಗಳು ಮುರಿದು ಹೋಗಿದ್ದು, ಅವುಗಳನ್ನು ಪರಿಶೀಲನೆ ಮಾಡಲು ಸರ್ಕಾರ ಕೈಗೊಂಡ ನಿರ್ಧಾರವೇನು? | ಲೋಕೋಪಯೋಗಿ ಇಲಾಖೆಯ ಅತಿಥಿ ಗೃಹದ ಕಾಮಗಾರಿಯು ಗುಣಮಟ್ಟದಿಂದ ಕೂಡಿರುತ್ತದೆ. ಹಾಗೂ ಕೊಠಡಿಯ ಕೆಲವು ಭಾಗದಲ್ಲಿ ಪ್ಲಾಸ್ಟರಿಂಗ್ ಕ್ರ್ಯಾಕ್‌ಗಳು ಬಂದಿದ್ದು, ಇದರಿಂದ ಕಟ್ಟಡದ ಸ್ಥಿರತೆಗೆ ಯಾವುದೇ ಹಾನಿ ಉಂಟಾಗಿರುವುದಿಲ್ಲ ಮತ್ತು ಮಂಚಗಳು, ಕುರ್ಚಿಗಳು ಹಾಲಿ ಸುಸ್ಥಿಯಲ್ಲಿರುತ್ತದೆ. |

ಸಂಖ್ಯೆ: ಲೋಇ 42 ಬಿಎಲ್ ಕ್ಯೂ 2023

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.

**ಸತೀಶ ಜಾರಕಿಹೊಳಿ**
**ಲೋಕೋಪಯೋಗಿ ಸಚಿವರು**